**ಕರ್ನಾಟಕ ರಾಜ್ಯ ಸಹಕಾರ ಸಂಘಗಳ ಲೆಕ್ಕಪರಿಶೋಧನಾ ನಿರ್ದೇಶಕರ ಕಛೇರಿ, ನಂ.17, "ಜಯನಿವಾಸ", ಶಂಕರಮಠ ರಸ್ತೆ, ಬಸವನಗುಡಿ, ಬೆಂಗಳೂರು-4.**

ಸಂಖ್ಯೆ:ಲೆಪಶಾ-1/ಇತರೆ/ಮೆಮೋ/89/2013-14 ದಿನಾಂಕ: 15.07.2013

**ಸುತ್ತೋಲೆ**

ವಿಷಯ: ಸಹಕಾರ ಸಂಘಗಳು ಲೆಕ್ಕಪರಿಶೋಧನೆಗೆ ಲೆಕ್ಕಪರಿಶೋಧಕರನ್ನು ಆಯ್ಕೆ ಮಾಡಿಕೊಳ್ಳುವ ಕುರಿತು.

ಉಲ್ಲೇಖ:
1. ಗೌ: ಉಚ್ಚನ್ಯಾಯಾಲಯ, ಧಾರವಾಡ ಸಂಚಾರಿ ಪೀಠದ ತೀರ್ಪು ದಿನಾಂಕ 05.07.2013.
2. ಕರ್ನಾಟಕ ರಾಜ್ಯ ಪತ್ರ ಸಂಖ್ಯೆ: CO/14/CLM/2013, Bengaluru , dated 10.07.2013
3. ಗೌ:ರಾಜ್ಯ ಉಚ್ಛನ್ಯಾಯಾಲಯದಲ್ಲು ಉಚ್ಚರಿಸಿದ ತೀರ್ಪು ದಿನಾಂಕ 15.07.2013 ರ ಕುರಿತು.

******

ಸಹಕಾರ ಸಂಘಗಳ ಕಲಂ 63 ಕ್ಕೆ ತಂದಿರುವ ತಿದ್ದುಪಡಿ ಅನ್ವಯ ಪ್ರತಿ ಸಹಕಾರ ಸಂಘಕ್ಕೆ 3 ಜನ ಲೆಕ್ಕಪರಿಶೋಧಕರ ಯಾದಿಯನ್ನು ಈ ಕಾರ್ಯಾಲಯದ ವೆಬ್‌ಸೈಟ್‌ನಲ್ಲಿ ದಿನಾಂಕ 06.04.2013, 09.04.2013 ಮತ್ತು 16.04.2013 ರಲ್ಲಿ ಪ್ರಕಟಣೆ ಮಾಡಲಾಗಿತ್ತು. ಈ ಕ್ರಮವನ್ನು ಪ್ರಶ್ನಿಸಿ, ಗೌ:: ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಕೆಲವೊಂದು ರಿಟ್ ಅರ್ಜಿಗಳು ದಾಖಲಾಗಿದ್ದು, ರಿಟ್ ಅರ್ಜಿ ಸಂಖ್ಯೆ : 79003 ರಿಂದ 79104/2013 ಗಳಿಗೆ ದಿನಾಂಕ 05.07.2013 ರಂದು ಗೌ:: ಕರ್ನಾಟಕ ಉಚ್ಚ ನ್ಯಾಯಾಲಯ, ಧಾರವಾಡ ಪೀಠದಲ್ಲಿ ತೀರ್ಪು ಬಂದಿದ್ದು, ಈ ತೀರ್ಪಿನನ್ವಯ ಹಾಗೂ ದಿನಾಂಕ 10.07.2013 ರಂದು ಪ್ರಕಟಿಸಲಾಗಿರುವ ಸಹಕಾರ ಸಂಘಗಳ ನಿಯಮಗಳ ನಿಯಮ 29(ಬಿ)(3) ರನ್ವಯ ಸಹಕಾರ ಸಂಘಗಳು ಆಯಾ ಗುಂಪಿನ ಅರ್ಹ ಲೆಕ್ಕಪರಿಶೋಧಕರಲ್ಲಿ ಒಬ್ಬರನ್ನು ಆಯ್ಕೆ ಮಾಡಿಕೊಳ್ಳುವ ಅವಕಾಶ ನೀಡಲಾಗಿರುತ್ತದೆ. ಈ ಪ್ರಕಾರವಾಗಿ ರಾಜ್ಯದಲ್ಲಿನ ಸಹಕಾರ ಸಂಘಗಳನ್ನು ಈ ಕೆಳಕಂಡಂತೆ “ಎ”, “ಬಿ” ಮತ್ತು “ಸಿ” ಗುಂಪುಗಳನ್ನಾಗಿ ವರ್ಗೀಕರಿಸಲಾಗಿರುತ್ತದೆ.

| **ಕ್ರಮ ಸಂಖ್ಯೆ** | **ಸಹಕಾರ ಸಂಘಗಳ ಪ್ರವರ್ಗಗಳು** | **ಲೆಕ್ಕಪರಿಶೋಧನೆ ನಿರ್ವಹಿಸಲು ಅರ್ಹರಿರುವ ಸನ್ನದು ಲೆಕ್ಕಪರಿಶೋಧಕರು ಮತ್ತು ಸನ್ನದು ಲೆಕ್ಕಪರಿಶೋಧಕರ ಫರ್ಮ್‌ಗಳ ಮತ್ತು ಇಲಾಖಾ ಲೆಕ್ಕಪರಿಶೋಧಕರುಗಳ ಪಟ್ಟಿ** |
|---|---|---|
| 1 | ₹ 25 ಕೋಟಿಗಿಂತ ಹೆಚ್ಚಿಗೆ ದುಡಿಯುವ ಬಂಡವಾಳ / ವ್ಯಾಪಾರ ವಹಿವಾಟು ಹೊಂದಿರುವ "ಎ" ಗುಂಪಿನ ಸಹಕಾರ ಸಂಘಗಳು | ಕನಿಷ್ಟ 10 ವರ್ಷಗಳ ಅನುಭವವುಳ್ಳ ಸನ್ನದು ಲೆಕ್ಕಪರಿಶೋಧಕರು ಮತ್ತು ಸನ್ನದು ಲೆಕ್ಕಪರಿಶೋಧಕರ ಫರ್ಮ್‌ಗಳು |

| | | |
|---|---|---|
| 2 | ₹ 10 ಕೋಟಿಗಿಂತ ಹೆಚ್ಚಿಗೆ ಮತ್ತು ₹ 25 ಕೋಟಿಗಿಂತ ಕಡಿಮೆ ದುಡಿಯುವ ಬಂಡವಾಳ / ವ್ಯಾಪಾರ ವಹಿವಾಟು ಹೊಂದಿರುವ "ಬಿ" ಗುಂಪಿನ ಸಹಕಾರ ಸಂಘಗಳು | ಕನಿಷ್ಟ 05 ವರ್ಷಗಳ ಅನುಭವವುಳ್ಳ ಸನ್ನದು ಲೆಕ್ಕಪರಿಶೋಧಕರು ಮತ್ತು ಸನ್ನದು ಲೆಕ್ಕಪರಿಶೋಧಕರ ಫರ್ಮ್‌ಗಳು |
| 3 | ₹ 10 ಕೋಟಿಗಿಂತ ಕಡಿಮೆ ದುಡಿಯುವ ಬಂಡವಾಳ / ವ್ಯಾಪಾರ ವಹಿವಾಟು ಹೊಂದಿರುವ ಜಿಲ್ಲಾವಾರು ಗುಂಪು ಮಾಡಲಾದ "ಸಿ" ಗುಂಪಿನ ಸಹಕಾರ ಸಂಘಗಳು | ಕನಿಷ್ಟ 03 ವರ್ಷಗಳ ಅನುಭವವುಳ್ಳ ಸನ್ನದು ಲೆಕ್ಕಪರಿಶೋಧಕರು ಮತ್ತು ಸನ್ನದು ಲೆಕ್ಕಪರಿಶೋಧಕರ ಫರ್ಮ್‌ಗಳು ಮತ್ತು ಜಿಲ್ಲಾವಾರು ಗುಂಪು ಮಾಡಲಾದ ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಇಲಾಖಾ ಸಿಬ್ಬಂದಿ. |
| | "ಎ" ಪ್ರವರ್ಗದ ಸಹಕಾರ ಸಂಘಗಳ ಎದುರಿಗೆ ಪಟ್ಟಿ ಮಾಡಲಾದ ಲೆಕ್ಕಪರಿಶೋಧಕರುಗಳು "ಬಿ" ಮತ್ತು "ಸಿ" ಪ್ರವರ್ಗದ ಸಹಕಾರ ಸಂಘಗಳ ಲೆಕ್ಕಪರಿಶೋಧನೆಯನ್ನು ನಿರ್ವಹಿಸಬಹುದಾಗಿರುತ್ತದೆ ಮತ್ತು "ಬಿ" ಪ್ರವರ್ಗದ ಎದುರಿಗೆ ಪಟ್ಟಿ ಮಾಡಲಾದ ಲೆಕ್ಕಪರಿಶೋಧಕರುಗಳು "ಸಿ" ಪ್ರವರ್ಗದ ಸಹಕಾರ ಸಂಘಗಳ ಲೆಕ್ಕಪರಿಶೋಧನೆಯನ್ನು ನಿರ್ವಹಿಸಬಹುದಾಗಿರುತ್ತದೆ. | |

ರಾಜ್ಯದಲ್ಲಿನ ಸಹಕಾರ ಸಂಘಗಳ ಲೆಕ್ಕಪರಿಶೋಧನೆ ಮಾಡಲು ಇಚ್ಛೆ ವ್ಯಕ್ತ ಪಡಿಸಿರುವ ಅರ್ಹ ಸನ್ನದು ಲೆಕ್ಕಿಗರು ಹಾಗೂ ಜಿಲ್ಲೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅರ್ಹ ಇಲಾಖೆಯ ಸಿಬ್ಬಂದಿಗಳ ವಿವರಗಳನ್ನು ಇಲಾಖಾ ವೆಬ್‌ಸೈಟ್ http://www.sahakaradarpana.kar.nic.in ರಲ್ಲಿ ಪ್ರಕಟಿಸಲಾಗಿರುತ್ತದೆ.

ಈ ಹಿನ್ನೆಲೆಯಲ್ಲಿ 2012-13 ನೇ ಸಾಲಿನ (ಬಾಕಿ ಸಾಲುಗಳು ಸೇರಿದಂತೆ) ಲೆಕ್ಕಪತ್ರಗಳ ಲೆಕ್ಕಪರಿಶೋಧನೆಗೆ ಸಂಬಂಧಿಸಿದ ಸಹಕಾರ ಸಂಘಗಳು ಆಯಾ ಗುಂಪಿನ ಲೆಕ್ಕಪರಿಶೋಧನೆ ಮಾಡಲು ಅರ್ಹ ಲೆಕ್ಕಪರಿಶೋಧಕರನ್ನು ಆಯ್ಕೆ ಮಾಡಿಕೊಂಡು ನಿಗದಿತ ಅವಧಿಯಲ್ಲಿ ಲೆಕ್ಕಪರಿಶೋಧನಾ ಕಾರ್ಯವನ್ನು ಪೂರ್ಣಗೊಳಿಸಲು ಈ ಮೂಲಕ ಎಲ್ಲಾ ಸಹಕಾರ ಸಂಘಗಳಿಗೆ ತಿಳಿಯಪಡಿಸಲಾಗಿದೆ.

ಸಹಿ/-
ನಿರ್ದೇಶಕರು
ಸಹಕಾರ ಸಂಘಗಳ ಲೆಕ್ಕಪರಿಶೋಧನೆ ಇಲಾಖೆ

**ರಾಜ್ಯದಲ್ಲಿನ ಎಲ್ಲಾ ಸಹಕಾರ ಸಂಘಗಳ ಗಮನಕ್ಕೆ.**